ಮತ್ತು ಮುಚ್ಚಿಡುವುದಕ್ಕೆ ಎರಡಕ್ಕೂ ಕಾವ್ಯವನ್ನು ಬಳಸುತ್ತಾರೆ. ನನ್ನ ಪ್ರಕಾರ, ನಾವು ಯಾವುದಕ್ಕೆ ಹೆದರುತ್ತೇವೆಯೋ ಅದಕ್ಕನುಗುಣವಾಗಿ ನಮ್ಮ ಭಾಷೆ ರೂಪುಗೊಳ್ಳುತ್ತದೆ. ಕಾವ್ಯದ ಭಾಷೆ ದ್ವಂದ್ವ, ಅಸ್ಪಷ್ಟತೆಯಿಂದ ಯಾಕೆ ಕೂಡಿರುತ್ತದೆ ಎಂದರೆ ಅದನ್ನು ಬಳಸುವವರಿಗೆ ಸತ್ಯ ಹೇಳಲು ಧೈರ್ಯವಿರುವುದಿಲ್ಲ. ಅದೊಂದು ಬಗೆಯ ಪ್ರಶ್ನಾರ್ಹ ಸಾಹಸ. ನಿನಗಿದನ್ನು ಹೇಳಬೇಕು ರಾಬಿಯಾ. ನಾವು ಆಫ್ಘನ್ನರು ಕಾವ್ಯವನ್ನು ಹೇಡಿಗಳ ಭಾಷೆ ಎನ್ನುತ್ತೇವೆ.

ನನಗೆ ನಿನ್ನ ಏಳು ಗಜಲುಗಳು ಮತ್ತು ಒಂದೆರಡು ಪದ್ಯಗಳ ಕಾವ್ಯ ಪರಂಪರೆಯ ಬಗ್ಗೆ ಆಸಕ್ತಿಯಿಲ್ಲ. ನೀನು ಕೊನೆಗೆ ರಕ್ತದಲ್ಲಿ ಬರೆದು ಬಿಟ್ಟುಹೋದ ಸಾಲುಗಳ ಬಗ್ಗೆಯೂ ಯೋಚಿಸುವುದಿಲ್ಲ. ನಾನು ದೇಹಾಹುತಿ ಮಾಡಿಕೊಳ್ಳುವ, ಅಕಸ್ಮಾತ್ತಾಗಿ ಹುತಾತ್ಮರಾಗುವವರ ರಕ್ತದಿಂದ ಸದಾ ಸೋಕುವ ಅಫ್ಘಾನಿಸ್ತಾನ ದೇಶದ ಹೆಣ್ಣುಮಗಳು. ನಾನು ನಿನ್ನ ದಾರುಣವಾದ ಹತ್ಯೆಯ ಬಗ್ಗೆ ಬಹಳ ಆತಂಕಿತಳಾಗಿದ್ದೇನೆ. ನಿನ್ನನ್ನು ಕೊಂದ ತಮ್ಮ ಹರಿಸ್‌ನ ಬಗ್ಗೆ ತಿಳಿದುಕೊಳ್ಳಬೇಕು. ಅವನು ನಿನ್ನ ಎರಡು ಮುಂಗೈಗಳನ್ನು ಕತ್ತರಿಸಲು ಆಜ್ಞಾಪಿಸಿದ್ದ. ಅವನು ನಿನ್ನನ್ನು ಕೊಲೆ ಮಾಡಲು ಬಹಳ ಸಮರ್ಪಕವಾದ ಸಿದ್ಧತೆ ಮಾಡಿಕೊಂಡಿದ್ದ. ಮುದ್ದಿನ ತಂಗಿಯಾದ ನಿನ್ನನ್ನು ಬಹಳ ಪ್ರೀತಿಸುತ್ತಿದ್ದ. ನಿನಗೆ ಗೊತ್ತಿರಲಿ, 2012ರ ಈ ವರ್ಷದಲ್ಲೂ ಆಫ್ಘನ್ ಅಣ್ಣತಮ್ಮಂದಿರು ತಮ್ಮ ಅಕ್ಕತಂಗಿಯರನ್ನು ಇನ್ನೂ ಕೊಲ್ಲುತ್ತಿದ್ದಾರೆ. ನಾವು ಪ್ರೀತಿಸುತ್ತ, ಮೋಹಿಸುತ್ತ, ಕೊಲ್ಲುತ್ತ, ಹಿಂಸಿಸುತ್ತ ಬದುಕುತ್ತಲೇ ಇದ್ದೇವೆ. ನಾವು ನಮ್ಮ ಹುಡುಗಿಯರನ್ನು ಆರಾಧಿಸುತ್ತ, ಗೌರವಿಸುತ್ತ, ಕತ್ತರಿಸುತ್ತ, ಸುಡುತ್ತ, ಉಸಿರುಗಟ್ಟಿಸಿ ಕೊಲ್ಲುತ್ತಲೇ ಇದ್ದೇವೆ. ನಾವು ಬದಲಾಗಿಲ್ಲ ರಾಬಿಯಾ.

ನನಗೆ ನಿನ್ನ ಪ್ರೇಮಿ ಬಕ್ತಾಶನ ಬಗ್ಗೆ ಕುತೂಹಲವಿದೆ. ದಂತಕತೆಗಳ ಪ್ರಕಾರ ನೀನೇ ಅವನ ಜೀವ ಉಳಿಸಿದೆಯಂತೆ. ಯುದ್ಧವೊಂದರಲ್ಲಿ (ಯುದ್ಧಗಳಿನ್ನೂ ಮುಗಿದಿಲ್ಲ!) ಮುಖ ಮುಚ್ಚಿಕೊಂಡು ಬಂದು ಕವಚ ಕತ್ತಿಗಳ ಹಿಡಿದು ನೀನು ಕಾಪಾಡಿದೆಯಂತೆ. ನಿನ್ನ ಹೂಂಕಾರಗಳಿಗೆ ಅಲ್ಲಿನ ಸೈನಿಕರು ಬೆದರಿ ಹೋದರಂತೆ. ನೀನು ಯುದ್ಧಭೂಮಿಯಿಂದ ಬಕ್ತಾಶನನ್ನು ಎತ್ತಿಕೊಂಡು ಹೋಗುವಾಗ ಸೈನಿಕರಿಗೆ ಯಾರೋ ದೇವತೆ ಬಂದಿರಬೇಕು ಎನಿಸಿತಂತೆ. ನನಗೆ ಆಫ್ಘನ್ನರು ನಿನ್ನನ್ನು ವರ್ಣಿಸುವುದನ್ನು ನೋಡಿ ನಗು ಬರುತ್ತದೆ. ನೀನು ಮೇಲಾಕಾಶದಲ್ಲಿ ತೇಲುವ ಪಾರಿವಾಳವಂತೆ. ಹವಳದ ತುಟಿಗಳ ಮುತ್ತಿನ ಹಲ್ಲುಗಳ ಮುಗುದೆಯಂತೆ. ಕೆಟ್ಟದೇನೆಂದರೆ, ನೀನು ಹುಡುಗಿಯಾಗಿ ಪ್ರೇಮವೆಂಬ ಕೊನೆಮೊದಲಿಲ್ಲದ ಸೆರೆಮನೆಯ ಬಂದಿಯಾಗಿದ್ದು. ರಾಬಿಯಾ, ನನ್ನ ಪ್ರಕಾರ ನಮಗೆ ಇಂಥ ಹಳಸಲು ಮಾತುಗಳನ್ನು ಬಿಟ್ಟು ಬೇರೆ ಏನೂ ಹೇಳಲು ಬರುವುದಿಲ್ಲ.

ನಿನ್ನ ಬಕ್ತಾಶ್, ಅವನು ನಿನಗೆ ಯೋಗ್ಯನಾಗಿದ್ದನೇ? ನೀನು ಅವನನ್ನು 'ಭೇಟಿ' ಆಗಿದ್ದೆಯಂತೆ. ರಾಜನ ಆಸ್ಥಾನದಲ್ಲಿ ನಡೆದ ಕೂಟವೊಂದರಲ್ಲಿ ನೀನು ಹುಡುಗಿಯಾದ ಕಾರಣಕ್ಕೆ ಹೋಗಲಾಗಲಿಲ್ಲವಂತೆ. ಹಾಗಾಗಿ ನೀನು ಮಾಳಿಗೆಯ ಮೇಲೆ ಬಂದು ಆಸ್ಥಾನದೊಳಗೆ ನಡೆಯುತ್ತಿದ್ದ ಸಂಗೀತ, ಕಾವ್ಯ, ಗಂಡಸರ ಮೋಜುಗಳನ್ನು ಕೇಳುತ್ತ ನಿಂತುಕೊಂಡಿದ್ದೆ. ಆಗ ನೀನು ಮೇಲಿಂದ ದೊಡ್ಡವರಿಗೆ ಮದ್ಯ ಸುರಿಯುತ್ತಾ, ಹಾಡುತ್ತಾ, ಬಡಿಸುತ್ತಾ, ಓಡಾಡುತ್ತಿದ್ದ ಸೊಗಸುಗಾರ ಬಕ್ತಾಶನನ್ನು ನೋಡಿ ಪ್ರೇಮಿಸಿಬಿಟ್ಟೆಯಂತೆ. ಎಂಥಾ ಗೊಡ್ಡು ಮಾತುಗಳು. ಇಲ್ಲಿಯೇ ನಿನ್ನ ಸಮಸ್ಯೆ ಶುರುವಾದದ್ದು. ಬಕ್ತಾಶ ನಿನ್ನ ತಮ್ಮನ ಗುಲಾಮ ಮತ್ತು ಆಸ್ಥಾನದ ಸೇವಕ. ರಾಜಕುಮಾರಿ ಗುಲಾಮನಿಗೆ ಒಲಿಯುವುದೇ? ಅದು ನಿನ್ನ ತಮ್ಮನ ಹೆಣದ ಮೇಲೆ ಮಾತ್ರ!

ನಿನಗೆ ಹೇಳಬೇಕಾದದ್ದೇನೆಂದರೆ, ರಾಬಿಯಾ ನಾವು ಇನ್ನೂ ಹಾಗೇ ಇದ್ದೇವೆ. ಇತ್ತೀಚೆಗೆ ಫೇಸ್‌ಬುಕ್ಕಿನಲ್ಲಿ ಹುಡುಗ-ಹುಡುಗಿಯರಿಬ್ಬರ ಫೋಟೋವನ್ನು ನೋಡಿದೆ. ಅದು ಎಲ್ಲ ಕಡೆ ಶೇರ್ ಆಗಿ ಹರಿದಾಡುತ್ತಿತ್ತು. ಅದರ ಕೆಳಗಡೆ 'ಇವರಿಬ್ಬರಿಗೂ ಗೆಳೆತನವಿತ್ತು' ಎಂದು ಬರೆದಿದ್ದರು. ಅವರ ದೇಹಗಳು ಮಾಗಿದ, ಆದರೆ ಕೆಳಗಿಳಿಸಲು ಮರೆತುಹೋದ ಬಾಡಿರುವ ಹಣ್ಣಿನ ಗೊಂಚಲುಗಳಂತಿದ್ದವು. ಇನ್ನೊಬ್ಬರು 'ಇಂಥವರಿಗೆ ಹೀಗೇ ಆಗಬೇಕು' ಎಂದು ಬರೆದಿದ್ದರು. ನೀನು ಬದುಕಿದ್ದರೆ ಶತಮಾನಗಳ ನಂತರ ನಿನ್ನನ್ನೂ ಹಾಗೆಯೇ ಕೊಲ್ಲುತ್ತಿದ್ದರು. ಅಫ್ಘಾನಿಸ್ತಾನದಲ್ಲಿ ಅಷ್ಟೇ ಏಕೆ, ಇವತ್ತಿನ ಪ್ರಪಂಚದಲ್ಲಿ ಪ್ರೀತಿಗೊಂದು ಜಾಗವೇ ಇಲ್ಲ.